# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 230 |
| ಸದಸ್ಯರ ಹೆಸರು | ಶ್ರೀ ಎನ್. ರವಿಕುಮಾರ್ |
| ಉತ್ತರಿಸುವ ದಿನಾಂಕ | 14-09-2022 |
| ಉತ್ತರಿಸುವವರು | ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ತಿಗಳರ ಪೇಟೆಯಲ್ಲಿರುವ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿದ ಬೆಂಗಳೂರು ನಗರ ಜಿಲ್ಲೆಯ 'ನೀಲಸಂದ್ರ ಗ್ರಾಮದ ಸರ್ವೆ ನಂ:79ರಲ್ಲಿ 15 ಎಕರೆ 12 ಗುಂಟೆ ಮತ್ತು ಹೊಂಗಸಂದ್ರ ಗ್ರಾಮದ ಸರ್ವೆ ನಂ:33ರಲ್ಲಿ 16 ಎಕರೆ 25 ಗುಂಟೆ ದೇವಸ್ಥಾನಕ್ಕೆ ಸೇರಿದ ಭೂಮಿಯನ್ನು ಅತಿಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಸದರಿ ಜಾಗವನ್ನು ಸರ್ಕಾರದ ವಶಕ್ಕೆ ಪಡೆಯಲು ಕೈಗೊಂಡ ಕ್ರಮಗಳೇನು; | ಬಂದಿದೆ.<br>ಬೆಂಗಳೂರು ನಗರ ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯ ಸ್ವಾಮಿ ದೇವಾಲಯವು ಪ್ರವರ್ಗ "ಬಿ" ವರ್ಗದ ಧಾರ್ಮಿಕ ಸಂಸ್ಥೆಯಾಗಿರುತ್ತದೆ. ಪ್ರಸ್ತಾಪಿತ ದೇವಾಲಯವು ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂಬರ್ 79 ರಲ್ಲಿ 15 ಎಕರೆ 12 ಗುಂಟೆ ವಿಸ್ತೀರ್ಣ ಹೊಂಗಸಂದ್ರ ಗ್ರಾಮದ ಸರ್ವೆ ನಂ 33 ರಲ್ಲಿ 16 ಎಕರೆ 25 ಗುಂಟೆ ಜಮೀನು ಕಂದಾಯ ದಾಖಲಾತಿಯಂತೆ ಇದ್ದು, ದೇವಾಲಯದ ಹೆಸರಿನಲ್ಲಿ ಇರುತ್ತದೆ.<br>ಸದರಿ ಜಮೀನಿನಲ್ಲಿ ಅತಿಕ್ರಮವಾಗಿ ಒತ್ತುವರಿ ಮಾಡಿಕೊಂಡಿರುವ ಕ್ರಮಗಳು ಈ ಕೆಳಕಂಡಂತಿದೆ.<br>ನೀಲಸಂದ್ರ ಗ್ರಾಮದ ಸರ್ವೆ ಸಂಖ್ಯೆ 79ರಲ್ಲಿ 15 ಎಕರೆ 12 ಗುಂಟೆ ಜಮೀನು ಗ್ರಾಮ ನಕಾಶೆಯಂತೆ ಸರ್ಕಾರಿ ಕೆರೆ ಅಂಗಳವಾಗಿದ್ದು, ಸ್ಕೆಲ್‌ನಂಬರ್ ಆಗಿದ್ದು, ಆಕಾರ್ ಬಂದಿನಂತೆ ಪೂರಾ ವಿಸ್ತೀರ್ಣವನ್ನು "ಬಿ" ಖರಾಬಿನಲ್ಲಿ ದಾಖಲಾಗಿರುತ್ತದೆ. ಸರ್ವೆ ಅಳತೆಯಂತೆ ರಸ್ತೆ 1-10 ಎಕರೆ-ಗುಂಟೆ, ಕಟ್ಟಡಗಳು 3-37 ಎಕರೆ-ಗುಂಟೆ, ಕಾಲುವೆ 0.10 ಎಕರೆ ಖಾಲಿ ಪ್ರದೇಶ 7-39 ಎಕರೆ-ಗುಂಟೆ ಸೇರಿ ಒಟ್ಟು 13-16 ಎಕರೆ-ಗುಂಟೆ ಇರುವುದಾಗಿ ಸರ್ವೆ ಇಲಾಖೆ ಹಾಗೂ ಧಾರ್ಮಿಕ ದತ್ತಿ ಇಲಾಖೆ ದಿನಾಂಕ:07.02.2015ರಂದು ಜಂಟಿಯಾಗಿ ಅಳತೆ ಕಾರ್ಯ ನಡೆಸಿ ನಕ್ಷೆ ಹಾಗೂ ವರದಿಯಂತೆ ತಿಳಿದುಬಂದಿದೆ.<br>ಸದರಿ ಜಮೀನು ಇನಾಂ ರದ್ದಿಯಾತಿ ಎಂಡಾರ್ಸ್‌ಮೆಂಟ್ ಮುಖಾಂತರ ದಿನಾಂಕ:06.02.1965ರಲ್ಲಿ ಶ್ರೀ ಧರ್ಮರಾಯ ಸ್ವಾಮಿಗೆ ಮಂಜೂರಾಗಿರುತ್ತದೆ. ಆದ್ದರಿಂದ ಸರ್ವೆ ನಂಬರ್ 79ರಲ್ಲಿ 15-12 ಎಕರೆ-ಗುಂಟೆ ಜಮೀನು ದೇವಾಲಯಕ್ಕೆ ಸೇರಿದ ಸ್ವತ್ತಾಗಿರುತ್ತದೆ.<br>ಪ್ರಸ್ತಾಪಿತ ಜಮೀನಿನಲ್ಲಿ 229ಜನ ಅನಧಿಕೃತದಾರರು ದೇವಾಲಯದ ಜಮೀನನ್ನು ಅತಿಕ್ರಮಣ ಮಾಡಿ ಮನೆಗಳನ್ನು ನಿರ್ಮಿಸಿ ಕೊಂಡಿರುತ್ತಾರೆ. ಸದರಿ ಅತಿಕ್ರಮಣ ಮಾಡಿದ ಒತ್ತುವರಿದಾರರ ವಿರುದ್ಧ ಸರ್ಕಾರವು ಈ ಕೆಳಕಂಡಂತೆ ಕ್ರಮ ಕೈಗೊಳ್ಳಲಾಗಿದೆ.<br>i) 13 ಜನ ಒತ್ತುವರಿದಾರರ ವಿರುದ್ಧ ಸಂಬಂಧಪಟ್ಟ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆಯನ್ನು ದಾಖಲು ಮಾಡಲಾಗಿರುತ್ತದೆ.<br>ii) 5 ಜನ ಅನಧಿಕೃತ ಒತ್ತುವರಿದಾರರ ವಿರುದ್ಧ ಮಾನ್ಯ ಕರ್ನಾಟಕ ಭೂ ಕಬಳಿಕೆ ನಿಷೇದ ವಿಶೇಷ ನ್ಯಾಯಾಲಯದಲ್ಲಿ ಪ್ರಕರಣಗಳನ್ನು ದಾಖಲು ಮಾಡಲಾಗಿದ್ದು ಸದರಿ ಪ್ರಕರಣಗಳ ವಿಚಾರಣೆ ದಿನಾಂಕ:19-09-2022ರಂದು ನಿಗದಿಯಾಗಿರುತ್ತದೆ.<br>iii) ದೇವಾಲಯದ 0-04ಗುಂಟೆ ವಿಸ್ತೀರ್ಣದ ಜಾಗದಲ್ಲಿ ಶ್ರೀ ಸಂಪಂಗಿರಾಮ ಬಿನ್ ಸಂಪಂಗಿ ಹಾಗೂ ಇತರರು ಮಾನ್ಯ ಸಿಟಿ ಸಿವಿಲ್ ನ್ಯಾಯಾಲಯ, ಬೆಂಗಳೂರು ಇಲ್ಲಿ ಮೂಲ ದಾವೆ ಸಂಖ್ಯೆ:9311/2004ನ್ನು ದಾಖಲು ಮಾಡಿ ತೆರವುಗೊಳಿಸದಂತೆ ನ್ಯಾಯಾಲಯದ ಮೊರೆಹೋಗಿರುತ್ತಾರೆ. ಸದರಿ ಪ್ರಕರಣವು ದಿನಾಂಕ:13-10-2022ಕ್ಕೆ ಸಾಕ್ಷಿಗಳ ವಿಚಾರಣೆಗೆ ನಿಗದಿಯಾಗಿರುತ್ತದೆ.<br>iv) 4 ಎಕರೆ 20 ಗುಂಟೆ ಜಮೀನಿನ ಹಕ್ಕುದಾರಿಕೆಯನ್ನು ಕೋರಿ ಶ್ರೀ ಮುನಿಯಪ್ಪ ರವರ ವಾರಸುದಾರರಾದ ಶ್ರೀ ಎಂ.ಮುನಿಸ್ವಾಮಿ ಹಾಗೂ ಇತರರು ಬೆಂಗಳೂರಿನ 8ನೇ ಅಡಿಷನಲ್ ಸಿಟಿ ಸಿವಿಲ್ ಜಡ್ಜ್ ನ್ಯಾಯಾಲಯದ ಮೂಲ ದಾವೆ ಸಂಖ್ಯೆ:6246/1997 |

ದಾಖಲಿಸಿದ್ದು, ಸಿವಿಲ್ ನ್ಯಾಯಾಲಯವು ದಿನಾಂಕ:02-03-2006 ರಂದು ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿದೆ.

ಸದರಿ ತೀರ್ಪಿನ ವಿರುದ್ಧ ವಾದಿಯು ಕರ್ನಾಟಕ ಉಚ್ಛನ್ಯಾಯಾಲಯದಲ್ಲಿ ಆರ್.ಏಫ್.ಎ. ಸಂಖ್ಯೆ:1702/2006ನ್ನು ದಾಖಲಿಸಿ ತಾತ್ಕಾಲಿಕ ತಡೆಯಾಜ್ಞೆಯನ್ನು ಕೋರಿದ್ದು, ನ್ಯಾಯಾಲಯವು ದಿನಾಂಕ:26-08-2015 ರಂದು ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿದೆ.

ಅರ್ಜಿದಾರರು ಸದರಿ ಉಚ್ಛನ್ಯಾಯಾಲಯದ ತೀರ್ಪಿನ ವಿರುದ್ಧ ಸರ್ವೋಚ್ಚ ನ್ಯಾಯಾಲಯದ ಎಸ್.ಎಲ್.ಪಿ ಸಂಖ್ಯೆ:34901/2015 ದಾಖಲಿಸಿದ್ದು, ಸರ್ವೋಚ್ಛ ನ್ಯಾಯಾಲಯವು ದಿನಾಂಕ:06-07-2017ರಂದು ಅರ್ಜಿದಾರರ ಅರ್ಜಿಯನ್ನು ವಜಾಗೊಳಿಸಿದೆ.

ಅರ್ಜಿದಾರರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆರ್.ಎಫ್.ಎ ಸಂಖ್ಯೆ: 1702/2006ರ ಪ್ರಕರಣವು ಇತ್ಯರ್ಥಗೊಳಿಸಲು ಬಾಕಿ ಇದ್ದು ಪ್ರಕರಣವು ದಿನಾಂಕ:13-09-2022 ರಂದು ವಿಚಾರಣೆಯು ನಿಗದಿಯಾಗಿರುತ್ತದೆ.

v) ಪ್ರಸ್ತಾಪಿತ ಸರ್ವೆ ನಂಬರ್‌ನಲ್ಲಿರುವ ಅನಧಿಕೃತ ದಾರರನ್ನು ತೆರವುಗೊಳಿಸಲು ತೆರವು ಕಾರ್ಯಾಚರಣೆ ಮಾಡಿ ತೆರವುಗೊಳಿಸಲಾಗಿರುವ 9-00 ಎಕರೆ ಜಮೀನಿಗೆ, ಕಾಂಪೌಂಡ್ ನಿರ್ಮಿಸಲು 80.00 ಲಕ್ಷಗಳ ಅಂದಾಜುಪಟ್ಟಿ ಮತ್ತು ನಕ್ಷೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ನೀಡಿ, ಕಾಮಗಾರಿಯನ್ನು ಕೆ.ಆರ್.ಐ.ಡಿ.ಎಲ್. ರವರಿಗೆ ವಹಿಸಲಾಗಿರುತ್ತದೆ. ಸದರಿ ಕಾಮಗಾರಿಯ 1/3 ಭಾಗದ ಮೊದಲನೇ ಕಂತಿನ ಬಾಬು ರೂ.26.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು ಬೆಂಗಳೂರು ನಗರ ಜಿಲ್ಲೆರವರು ದಿನಾಂಕ:15.04.2017ರಂದು ಬಿಡುಗಡೆ ಮಾಡಿರುತ್ತಾರೆ.

vi) ಸದರಿ ಕಾಮಗಾರಿಯ ಜಿಲ್ಲಾಧಿಕಾರಿ, ಬೆಂಗಳೂರು ನಗರ ಇವರ ಅಧಿಕೃತ ಜ್ಞಾಪನಾ ಸಂಖ್ಯೆ:ಡಿವಿಎಸ್ (ಎ) ಸಿಆರ್ 10/1989-90 ದಿ:12-11-2020ನ್ನು ಪ್ರಶ್ನಿಸಿ ಶ್ರೀ ತಾಯಪ್ಪ ಎಂಬುವವರು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13506/2020 ದಾಖಲಿಸಿದ್ದು, ಮಾನ್ಯ ಉಚ್ಛ ನ್ಯಾಯಾಲಯವು ಯಥಾ ಸ್ಥಿತಿಯನ್ನು ಕಾಪಾಡುವಂತೆ ಮಧ್ಯಂತರ ತೀರ್ಪು ನೀಡಿದ್ದು, ಸದರಿ ಮಧ್ಯಂತರ ತೀರ್ಪನ್ನು ತೆರವುಗೊಳಿಸಲು ಸರ್ಕಾರದ ಪರವಾಗಿ ಲಿಖಿತ ಆಕ್ಷೇಪಣೆಗಳನ್ನು ಸಲ್ಲಿಸಲಾಗಿದ್ದು, ಮಾನ್ಯ ಉಚ್ಛನ್ಯಾಯಾಲಯವು ಪ್ರಕರಣವನ್ನು ಆದೇಶಕ್ಕೆ ಕಾಯ್ದಿರಿಸಿರುತ್ತದೆ.

ಸದರಿ ಪ್ರಶ್ನಿತ ಸ್ವತ್ತಿಗೆ ಸಂಬಂಧಿಸಿದಂತೆ ಯಾವುದೇ ಖಾತೆಯನ್ನು ಮಾಡದಂತೆ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಬೆಂಗಳೂರು ಇವರಿಗೆ ಕೋರಿದ್ದು, ಪಾಲಿಕೆಯು ಪ್ರಶ್ನಿತ ಸ್ವತ್ತಿಗೆ ಯಾವುದೇ ಖಾತೆ ಮಾಡುವುದಿಲ್ಲವೆಂದು ತಿಳಿಸಿರುತ್ತಾರೆ ಹಾಗೂ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಮನೆ ಮತ್ತು ಮಳಿಗೆಗಳಿಗೆ ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸಂಪರ್ಕ ನೀಡುವ ಬಗ್ಗೆ ಸಂಬಂಧಪಟ್ಟ ಇಲಾಖೆಗೆ ಅನುಮತಿ ಪಡೆಯದೆ ಕ್ರಮ ವಹಿಸಬಾರದೆಂದು ತಿಳಿಸಲಾಗಿರುತ್ತದೆ.

**ಹೊಂಗಸಂದ್ರ ಗ್ರಾಮದ ಸರ್ವೆ ನಂಬರ್ 33 ರ ಜಮೀನು**

ವಿಶೇಷ ಜಿಲ್ಲಾಧಿಕಾರಿ ಬೆಂಗಳೂರು ಜಿಲ್ಲೆ ಇವರು ಆದೇಶ ಸಂಖ್ಯೆ ಐಎನ್‌ಎ 182/1997-98 ದಿನಾಂಕ: 21-04-2021 ರಲ್ಲಿ ಹೊಂಗಸಂದ್ರ ಗ್ರಾಮದ ಸರ್ವೆ ನಂಬರ್ 33 ರಲ್ಲಿ 16-25 ಎ/ಗು ಜಮೀನಿನ ಅದಿಭೋಗದಾರಿಕೆಯ ಹಕ್ಕನ್ನು ಶ್ರೀ ಕೆ.ಪಿ. ಗೋವಿಂದರೆಡ್ಡಿ ಹಾಗೂ ಇತರರಿಗೆ ಮಂಜೂರು ಮಾಡಿರುತ್ತಾರೆ. ಸದರಿ ಆದೇಶವನ್ನು ಇಲಾಖೆಯು ಪ್ರಶ್ನಿಸಿ ಕರ್ನಾಟಕ ಮೇಲ್ಮನವಿ ಪ್ರಾಧಿಕಾರದಲ್ಲಿ ಅಪೀಲು ಸಂಖ್ಯೆ:572/2004 ನ್ನು ದಾಖಲಿಸಿದ್ದರು. ಸದರಿ ಪ್ರಕರಣವನ್ನು ಮೇಲ್ಮನವಿ ಪ್ರಾಧಿಕಾರವು ದಿನಾಂಕ:28-04-2014 ರಂದು ವಜಾಗೊಳಿಸಿರುತ್ತಾರೆ.

ಕರ್ನಾಟಕ ಮೇಲ್ಮನವಿ ಪ್ರಾಧಿಕಾರದ ದಿನಾಂಕ:28-04-2014ರ ಆದೇಶವನ್ನು ಪ್ರಶ್ನಿಸಿ ಶ್ರೀಧರ್ಮರಾಯ ಸ್ವಾಮಿ ದೇವಾಲಯನ್ನು ಪ್ರತಿನಿಧಿಸಿ ಸಹಾಯಕ ಆಯುಕ್ತರು, ನಗರಸಭಾವಲಯ, ಬೆಂಗಳೂರು ಇವರು ಮಾನ್ಯ ಉಚ್ಛನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ28866/2014ನ್ನು ದಾಖಲಿಸಿದ್ದು, ಸದರಿ ಪ್ರಕರಣವು ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಬಾಕಿ ಇರುತ್ತದೆ

| | | |
|---|---|---|
| ಆ) | ಶ್ರೀ ಧರ್ಮರಾಯಸ್ವಾಮಿ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ: 79ರಲ್ಲಿ 15 ಎಕರೆ 12 ಗುಂಟೆ ಜಾಗದಲ್ಲಿ ಅನಧಿಕೃತವಾಗಿ ಒತ್ತುವರಿ ಮಾಡಿ ಅಕ್ರಮವಾಗಿ ನಿರ್ಮಿಸಿರುವ ಮನೆಗಳಿಗೆ/ ಕಟ್ಟಡಗಳಿಗೆ ಬಿ.ಬಿ.ಎಂ.ಪಿ ವತಿಯಿಂದ ಸೌಲಭ್ಯಗಳನ್ನು ಕಲ್ಪಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸರ್ಕಾರದ ಅನುಮತಿ ಪಡೆಯದೆ ಬಿ.ಬಿ.ಎಂ.ಪಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳಿಗೆ ಸರ್ಕಾರ ಯಾವಾಗ ಆಕ್ಷೇಪಣೆಯನ್ನು ಸಲ್ಲಿಸಿದೆ; (ವಿವರ ನೀಡುವುದು) | ಬಂದಿದೆ.<br><br>ಪ್ರಸ್ತಾಪಿತ ದೇವಾಲಯಕ್ಕೆ ಸೇರಿದ ನೀಲಸಂದ್ರ ಗ್ರಾಮದ ಸರ್ವೆ ನಂ 79ರಲ್ಲಿನ 15-12 ಎಕರೆ/ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಪಾಲಿಕೆ ವತಿಯಿಂದ ಪ್ರಶ್ನಿತ ಸ್ವತ್ತಿಗೆ ಮುಂದೆ ಯಾವುದೇ ಖಾತೆಯನ್ನು ಮಾಡದಂತೆ ಬೃಹತ್ ಬೆಂಗಳೂರು ಮಹಾಗರ ಪಾಲಿಕೆಯ ಸಹಾಯಕ ಕಂದಾಯ ಅಧಿಕಾರಿ, (ಶಾಂತಿನಗರ) ಉಪವಿಭಾಗ, ಬೆಂಗಳೂರು ಇವರಿಗೆ ತಿಳಿಸಲಾಗಿದ್ದು, ಪಾಲಿಕೆ ವತಿಯಿಂದ ಪ್ರಶ್ನಿತ ಸ್ವತ್ತಿಗೆ ಸಂಬಂಧಿಸಿದದಂತೆ ಇನ್ನು ಮುಂದೆ ಯಾವುದೇ ಖಾತೆ ಮಾಡುವುದಿಲ್ಲವೆಂದು ಸಹಾಯಕ ಕಂದಾಯ ಅಧಿಕಾರಿಯವರು ತಿಳಿಸಿರುತ್ತಾರೆ.<br><br>ಸಹಾಯಕ ನಿರ್ವಾಹಕ ಅಭಿಯಂತರರು ಬೆಸ್ಕಾಂ, ಆಸ್ಟಿನ್ ಟೌನ್ ರವರಿಗೆ ಪತ್ರ ಬರೆದು ಪ್ರಸ್ತಾಪಿತ ಸರ್ವೆ ನಂಬರ್ ನಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಿರುವ ಮನೆ ಮತ್ತು ಮಳಿಗೆಗಳಿಗೆ ತಮ್ಮ ಸಂಸ್ಥೆಯಿಂದ ನೀರು ಸರಬರಾಜು ಮತ್ತು ಒಳಚರಂಡಿ ವ್ಯವಸ್ಥೆ ಸಂಪರ್ಕ ನೀಡಿರುವ ಮಾಹಿತಿಗಳನ್ನು ನೀಡಲು ಹಾಗೂ ಇನ್ನು ಮುಂದೆ ಇಲಾಖಾ ಅನುಮತಿ ಪಡೆಯದೇ ಯಾವುದೇ ಮನೆ ಮತ್ತು ಮಳಿಗೆಗಳಿಗೆ ನೀರು ಸರಬರಾಜು ಮತ್ತು ಒಳಚರಂಡಿಯ ವ್ಯವಸ್ಥೆಯ ಸಂಪರ್ಕ ನೀಡದಂತೆ ತಿಳಿಸಲಾಗಿರುತ್ತದೆ.<br><br>ಅನಧಿಕೃತದಾರರ ಹೆಸರಿಗೆ ಖಾತಾಗಳನ್ನು ಮಾಡದಂತೆ ಬಿ.ಬಿ.ಎಂ.ಪಿ, ಆಯುಕ್ತರಿಗೆ ಹಾಗೂ ವಿದ್ಯುತ್ ಸರಬರಾಜು ಮತ್ತು ಕುಡಿಯುವ ನೀರು ಮತ್ತು ಒಳಚರಂಡಿ ಸೌಲಭ್ಯ ಕಲ್ಪಿಸದಂತೆ ಸಂಬಂಧಿಸಿದ ಅಧಿಕಾರಿಗಳಿಗೆ ತಿಳಿಸಲಾಗಿರುತ್ತದೆ.<br><br>ಪ್ರಸ್ತಾಪಿತ ಜಾಗದಲ್ಲಿ ಅನಧಿಕೃತದಾರರು ಮನೆಗಳನ್ನು ನಿರ್ಮಾಣ ಮಾಡಿದ್ದು, ಮನೆಗಳನ್ನು ನಿರ್ಮಾಣ ಮಾಡುವ ಮುನ್ನ ನಿರ್ಮಾಣ ಕಾಮಗಾರಿ ಕೈಗೊಳ್ಳಲು ಅನುಮತಿ ಕೋರಿ ತಮಗೆ ಸಲ್ಲಿಸಲಾದ ಎಲ್ಲಾ ಅಗತ್ಯ ದಾಖಲೆಗಳನ್ನು ಸಲ್ಲಿಸುವಂತೆ ಕೋರಿ ಬಿಬಿಎಂಪಿಯ ಕಂದಾಯ ಅಧಿಕಾರಿ, ಬೆಂಗಳೂರು ರವರಿಗೆ ಪತ್ರಬರೆಯಲಾಗಿದೆ<br><br>ಕಟ್ಟಡಗಳಿಗೆ ವಿದ್ಯುತ್ ಸಂಪರ್ಕ ಹಾಗೂ ನೀರು ಸರಬರಾಜು ಮತ್ತು ಒಳಚರಂಡಿ ಸಂಪರ್ಕವನ್ನು ಪಡೆಯುವ ಮುನ್ನ ತಮ್ಮ ಅಧೀನ ಕಛೇರಿಗಳಿಗೆ ಸಲ್ಲಿಸಿರುವ ಅರ್ಜಿ ಹಾಗೂ ಅರ್ಜಿಯೊಂದಿಗೆ ಒದಗಿಸಿರುವ(ಕರಾರು ಪತ್ರ, ಕ್ರಯ ಪತ್ರ, ಹಕ್ಕು ವರ್ಗಾವಣೆ ಪತ್ರ, ಜಮೀನಿನ ಹಕ್ಕಿಗೆ ಸಂಬಂದಿಸಿರುವ ದಾಖಲೆಗಳು) ಇತರೆ ದಾಖಲೆಗಳು) ದಾಖಲೆಗಳನ್ನು ಸಲ್ಲಿಸುವಂತೆ ಕೋರಿ ಮುಖ್ಯ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ ನಿಯಮಿತ(ಬೆಸ್ಕಾಂ) ಬೆಂಗಳೂರು ರವರಿಗೆ ಹಾಗೂ ನೀರು ಸರಬರಾಜು ಮತ್ತುಒಳಚರಂಡಿ ಪತ್ರ ಬರೆಯಲಾಗಿದೆ.<br><br>ಇನ್ನು ಮುಂದೆ ಇಲಾಖಾ ಅನುಮತಿ ಪಡೆಯದೇ ಯಾವುದೇ ಮನೆ ಮತ್ತು ಮಳಿಗೆಗಳಿಗೆ ನೀರು ಸರಬರಾಜು ಮತ್ತುಒಳಚರಂಡಿ ವ್ಯವಸ್ಥೆಯ ಸಂಪರ್ಕ ನೀಡದಂತೆ ತಿಳಿಸಲಾಗಿರುತ್ತದೆ. |
| ಇ) | ಈ ಅಕ್ರಮಗಳಿಗೆ ಸಹಕರಿಸಿದ ಎಷ್ಟು ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಲಾಗಿದೆ? (ವಿವರ ನೀಡುವುದು) | ಪ್ರಶ್ನಿತ ಪ್ರಕರಣಕ್ಕೆ ಸಂಬಂಧಿಸಿದಂತೆ, 2011-12ನೇ ಸಾಲಿನಿಂದ 2021-22ನೇ ಸಾಲಿನವರೆಗೆ ಕರ್ತವ್ಯ ನಿರ್ವಹಿಸಿರುವ ಅಧಿಕಾರಿ/ನೌಕರರ ಬಗ್ಗೆ ಮೇಲ್ನೋಟಕ್ಕೆ ಕರ್ತವ್ಯಲೋಪ ಕಂಡು ಬಂದಿರುವ ಹಿನ್ನಲೆಯಲ್ಲಿ ಪ್ರಥಮ ಹಂತದಲ್ಲಿ 06 ಅಧಿಕಾರಿ/ನೌಕರರಿಗೆ ಕಾರಣ ಕೇಳಿ ನೋಟೀಸನ್ನು ದಿನಾಂಕ:19-04-2022 ರಂದು ಜಾರಿ ಮಾಡಲಾಗಿದ್ದು, ಸದರಿ ನೋಟೀಸ್‌ಗೆ ಅಧಿಕಾರಿ/ನೌಕರರು ಲಿಖಿತ ವಿವರಣೆಯನ್ನು ವಿವಿಧ ದಿನಾಂಕಗಳಲ್ಲಿ ಸಲ್ಲಿಸಿದ್ದು, ಲಿಖಿತ ವಿವರಣೆಗಳ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಕ್ರಮ ಕೈಗೊಳ್ಳಲು ಕ್ರಮಜರುಗಿಸಲಾಗಿದೆ |

ಸಂಖ್ಯೆ: ಕಂಇ 144 ಮುಸಪ್ರ 2022

(ಶಶಿಕಲಾ. ಅ. ಜೊಲ್ಲೆ)
ಮುಜರಾಯಿ, ಹಜ್ ಹಾಗೂ ವಕ್ಫ್ ಸಚಿವರು